Mr. SPEAKER.—That was given in answer to another question..

Sri H. C. LINGA REDDY.—What is the amount involved, Sir?

Sri H. SIDDAVEERAPPA.—If the Hon'ble Member wants to know what exactly the plan is, it is printed and it gives all the information. I shall place it on the Table.

Sri H. C. LINGA REDDY.—You have mentioned that Srimathi Kamaladevi Chattopadhyaya visited the Kolar Wool Spinning Centre, and suggested that the kamblis manufactured may be purchased by Government of India for the use of the Military. Has she also recommended that these kamblies may be purchased by State Government for their use, Sir?

Sri H. SIDDAVEERAPPA.—Information now available is to the effect that she recommended to Government of India. Government of India subsequently called for the sample and unfortunately, the they have informed us that the goods that are manufacturep at Kolar are not to their specification and hence they cannot place any order. That is the latest information.

Sri H. C. LINGA REDDY.—Are Government contemplating to purchase kamblies for their use in the State, Sir, for the use of the patients in hospitals and for other governmental purposes?

Sri H. SIDDAVEERAPPA.—Well, that will be examined. The chief difficulty is about the cost; the cost does not compare well with regard to other kamblies manufactured in other places.

Sri K. LAKKAPPA.—Have you made any arrangements to market the produce produced by the cottage industries?

Sri H. SIDDAVEERAPPA.—Yes, Sir.

Sri K. LAKKAPPA.—What is that arrangement, Sir?

Sri H. SIDDAVEERAPPA.—We have recently opened a number of emporia whereby we want to encourage the sale of these manufactured goods.

Sri K. LAKKAPPA.—You have said there are 22 centres. May I know where the centres are opened, Sir?

Mr. SPEAKER.—That is answered.

Sri K. LAKKAPPA.—What is the specific help you are giving for those who go there for training?

Sri H. SIDDAVEERAPPA.—Some of them are given scholarships and some are given aid by way of getting training in the centre. These centres are more or less only for the purpose of training the artisan in that trade.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಕೋಲಾರದ ಕಂಬಳಿಗಳು ಬೇರೆ ಕಂಬಳಿಗಳಿಗಿಂತ ಉತ್ತಮ ವಾಗಿದ್ದು ನಯವಾಗಿರುತ್ತವೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ಧವೀರಪ್ಪ.—ಚಿತ್ರದುರ್ಗದಲ್ಲಿಯೂ ಒಳ್ಳೆಯ ಕಂಬಳಿಗಳು ತಯಾರಾಗುತ್ತವೆಯೆಂದು ಕೇಳಿದ್ದೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅದಕ್ಕಿಂತ ಕೋಲಾರದ ಕಂಬಳಿಗಳು ಹೆಚ್ಚು ಬಾಳಿಕೆ ಬರುತ್ತವೆ ಮತ್ತು ನಯವಾಗಿರುತ್ತವೆ ಎಂಬುದು ತಮಗೆ ಗೊತ್ತಿದೆಯೇ?

Sri H. SIDDAVEERAPPA.—I have seen kumblies manufactured in Kolar also. But the difficulty appears to be about the price factor. That is the only thing. That will be certainly examined. As a matter of fact, since the Hon'ble Member himself is on the Committee, he may give his valuable suggestions and they will be examined.

ಶ್ರೀ ಜಿ. ನಾರಾಯಣಗೌಡ.—ಕೋಲಾರದ ಕಂಬಳಿ ಬೆಲೆ ಸ್ವಲ್ಪ ಹೆಚ್ಚಾಗಿದ್ದರೂ ಬಹಳ ದಿನ ಬಾಳಿಕೆ ಬರುತ್ತದೆ ಎಂಬುದು ಗಮನಕ್ಕೆ ಬಂದಿದೆಯೇ?

Mr. SPEAKER.—Some kumblies are not durable, I know.

Sri A. BHEEMAPPA NAIK.—Are the Government aware that there is a wool weaving centre established in the Industrial School at Chitaldrug?

Sri H. SIDDAVEERAPPA.—Yes, there is one centre.

Sri A. BHEEMAPPA NAIK.—Do they propose to improve it?

Sri H. SIDDAVEERAPPA.—I will examine it.

Paddy smuggled out

Q.—848. Sri S. GOPALA GOWDA (Sagar-Hosanagar).—

Will the Government be pleased to state:—

(*a*) whether they are aware that a large quantity of paddy is being smuggled out of the State;

(*b*) what are the measures taken by the Government to prevent this?

A.—Sri H. SIDDAVEERAPPA (Minister for Home and Industries).—

(*a*) Some information and complaints were received to this effect.

(*b*) Adequate preventive measures have been taken by posting civil as well as M. A. R. Police at the State borders to prevent smuggling. Some cases of smuggling have also been detected and cases have been put up in Shimoga and Mysore Districts. It is reported that the situation has improved on this account.

ಶ್ರೀ ಎಸ್. ಗೋಪಾಲಗೌಡ.—ಸ್ಪಾಮಿ, ಎಷ್ಟು ಕೇಸುಗಳನ್ನು ಹಾಕಿದ್ದೀರಿ ?

Sri H. SIDDAVEERAPPA.—Recently one case has been launched in Mysore District.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗ ಜಿಲ್ಲೆಯಲ್ಲಿ ಯಾವುದಾದರೂ ಕೇಸುಗಳನ್ನು ಹಾಕಿದ್ದಾರೆಯೇ ?

Mr. SPEAKER.—In (*b*) it is stated that "some cases have been put up in Shimoga and Mysore Districts."

ಶ್ರೀ ಎಸ್. ಗೋಪಾಲಗೌಡ.—ಎಷ್ಟು ಕೇಸು ಹಾಕಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿವರ ಈಗ ನನ್ನ ಲ್ಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈಗ ಹೊರಗೆ ಸಾಗುತ್ತಾ ಇರತಕ್ಕ ಬತ್ತವನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನಿಲ್ಲಿಸುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿ ಕಾವಲು ಕಾಯತಕ್ಕ ಪೋಲೀಸ್ ಸಿಬ್ಬಂದಿಗೆ ಏನು ಸೌಕರ್ಯವನ್ನು ಕಲ್ಪಿಸಲಾಗಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೆ ಸ್ಪೆಷಲ್ ಡಿ. ಎ. ಮತ್ತು ಇರಲು ವನತಿ ಸೌಕರ್ಯ—ಇವುಗಳನ್ನು ಕಲ್ಪಿಸಿದೆ.

ಶ್ರೀ ಎಸ್. ಗೋಪಾಲಗೌಡ.—ಎಷ್ಟು ಟಿ. ಎ. ಕೊಡುತ್ತೀರಿ ?

Mr. SPEAKER.—Don't you worry about that. They will look after it.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿ 'ಬೇಲ ಏದ್ದು ಹೊಲ ಮೇಯ್ಯುತ್ತಿದೆ' ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಅಂದರೆ, ಅವರು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ, ಇನ್ನೂ ಬತ್ತ ಹೊರಗೆ ಸಾಗುತ್ತಲೇ ಇದೆ, ಕೆಲವು ವೇಳೆ ಲಾರಿಗಳಲ್ಲಿ ಬತ್ತ ಹೊರಗೆ ಸಾಗುತ್ತಿದ್ದರೂ ಈ ಕಾವಲುಗಾರರು ನೋಡಿಯೂ ನೋಡದೆ ವರ್ತಿಸುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನಿರ್ದಿಷ್ಟವಾಗಿ ಯಾವುದಾದರೂ ಒಂದು ಕೇಸು ತಿಳಿಸಿದರೆ ತನಿಖೆಮಾಡಿಸಿ ನೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೇವೆ. ಇದುವರಗೆ ನನಗೆ ಯಾವುದೂ ಈ ರೀತಿ ನಿರ್ದಿಷ್ಟವಾದ complaint ಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹೋಗಲಿ, ಈ ಬತ್ತದ ವ್ಯಾಪಾರದಲ್ಲಿ ನಿರತರಾಗಿ ಬತ್ತ ಒದಗಿಸುವವರು ಲೈಸೆನ್ಸ್ ತೆಗೆದುಕೊಳ್ಳಬೇಕೆಂಬ ಬಗ್ಗೆ ಕಾನೂನು ಜಾರಿ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಮಾಡಿದೆ.

ಶ್ರೀ ಎಸ್. ಗೋಪಾಲಗೌಡ.—ಸಂಸ್ಥಾನಾದ್ಯಂತ ಎಷ್ಟು ಮಂದಿ ವ್ಯಾಪಾರ ಮಾಡುತ್ತಾರೆ, ಎಷ್ಟು ಮಂದಿ ಈ ವ್ಯಾಪಾರದ ನೋಗಿನಲ್ಲಿ ಬತ್ತವನ್ನು ಸಂಸ್ಥಾನದ ಹೊರಗೆ ಸಾಗಿನುತ್ತಿದ್ದಾರೆ ಎಂಬ ಬಗ್ಗೆ ಸರ್ಕಾರದಲ್ಲಿ ಪಟ್ಟಿಯೇನಾದರೂ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಬತ್ತದ ವ್ಯಾಪಾರ ಗಾರರ ವಿಚಾರದಲ್ಲಿ licence condition ನನ್ನು ಬಹಳ strict ಆಗಿ enforce ಮಾಡಿದ್ದೇವೆ. ಈ ವ್ಯಾಪಾರದಲ್ಲಿ ನಿರತರಾಗಿರುವವರ stock position ಯಾವ ರೀತಿ ಇದೆ ಎಂದು ನೋಡಿಕೊಂಡು ಇವರು ನಿಯತ್ತಿನಿಂದ ವ್ಯಾಪಾರ ಮಾಡಲಿ ಎಂಬ ಉದ್ದೇಶದಿಂದ ಈ ರೀತಿ ಮಾಡಿದೆ.

ಶ್ರೀ ಎಸ್. ಗೋಪಾಲಗೌಡ.—ಈ ಬಗ್ಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳು ಏನು ಅಭಿಪ್ರಾಯ ಪಟ್ಟಿರುತ್ತಾರೆ ?

ಶ್ರೀ ಎಚ್. ಸಿದ್ದವೀರಪ್ಪ.—Licence condition strict ಆಗಿ enforce ಮಾಡಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಗುಂಡ್ಲುಹೇಚೆ ತಾಲ್ಲೂಕಿನಲ್ಲಿ ಅಧಿಕಾರಿಗಳು ಈ ಬತ್ತ ಸಾಗಾಣಿಕೆ ಕಾರ್ಯದಲ್ಲಿ ಭಾಗವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಅಂಥ ಕೇಸುಗಳು ಯಾವುವೂ ಗಮನಕ್ಕೆ ಬಂದಿಲ್ಲವೆಂದು ಆಗಲೇ ಹೇಳಿದ್ದಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆ ರೀತಿ ವರ್ತಿಸಿರುವ ಬಗ್ಗೆ ಸರ್ಕಾರಕ್ಕೇನಾದರೂ ವರದಿ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಲಿಖಿತ ಮೂಲಕ ವರದಿ ಯಾವುದೂ ಬಂದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಬಂದಿದ್ದರೆ ಈ ಬಗ್ಗೆ ನೂಕ್ತ ಕಾರ್ಯಕ್ರಮ ಕೈಗೊಳ್ಳಲು ವರದಿ ಕೇಳಿದ್ದೀರಾ ?

Sri H. SIDDAVEERAPPA.—On information furnished by an Hon'ble Member, I have called for a report.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಮೈಸೂರು ಜಿಲ್ಲೆಯ ಕೇಸು ಯಾವ ತಾಲ್ಲೂಕಿಗೆ ಸಂಬಂಧಿಸಿದ್ದು ?

ಶ್ರೀ ಎಚ್. ಸಿದ್ದವೀರಪ್ಪ.—ಜ್ಞಾಪಕವಿಲ್ಲ; ಆದರೂ ಅದು ನಂಜನಗೂಡು ಸಬ್ ಡಿವಿಜನ್ನಿಗೆ ಸಂಬಂಧಿಸಿದ್ದೆಂದು ಕಾಣುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಬಗ್ಗೆ ಅಲ್ಲಯ ಸ್ಥಳೀಯ ಅಧಿಕಾರಿಗಳಿಗೆ ತಕ್ಕ ತಿಳಿವಳಿಕೆ ಕೊಟ್ಟು ತಕ್ಕ ಬಂದೋಬಸ್ತು ಮಾಡುತ್ತೀರಾ ?

Mr. SPEAKER.—You presume something and base your question on that!

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಆಂಧ್ರದಿಂದ ಮೈಸೂರು ಸಂಸ್ಥಾನಕ್ಕೆ ಅಕ್ಕ ವಿಪರೀತವಾಗಿ ಬರುತ್ತಿದೆಯೆಂಬುದು ಗೊತ್ತೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ನನಗೆ ಯಾವುದೂ ವರದಿ ಬಂದಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಇತ್ತೀಚೆಗೆ ಹಿಂದೂಪುರದಲ್ಲಿ ಈ ಬಗ್ಗೆ ಗಲಾಟೆ ಆದುದು ತಮಗೆ ಗೊತ್ತಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ಯಾವ ವರದಿಯೂ ಬಂದಿಲ್ಲ.

Renewal of Gun licences.

Q.—1013. Sm. B. L. SUBBAMMA (Chikmagalur-Mudigere).—

Will the Government be pleased to state :—

(*a*) whether the system of presenting the petition along with the treasury chellan for the renewal of gun licences has been brought into force instead of a stamped paper ;

(*b*) the reason for the same ;

(*c*) whether any law has been passed directing that in the case of breach-loader, a stamp of the value of twelve annas has to be affixed and in the case of muzzle-loader, a stamp of the value of one anna has to be affixed while presenting the petition in addition to the above restrictions ?

A.—Srl H. SIDDAVEERAPPA (Minister for Home and Industries).—

(*a*) Yes.

(*b*) According to the Indian Arms Rules which came into force in this State from July 1952, the fees for grant and renewal of licences under these rules have to be paid in cash. The payment of fees by means of stamps is not permissible under the rules.

(*c*) No. (The affixation of court fee stamps on applications made to the Magistrate is governed by the provisions of the Mysore Court Fees Act and the stamps are not affixed on the basis of the type of weapon held by the applicants).

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಬಂದೂಕು ಲೈಸೆನ್ಸ್ renew ಮಾಡಲು ಹಿಂದೆ ಇದ್ದ ಪದ್ಧತಿಯನ್ನು ಈಗ ಮಾರ್ಪಡಿಸಲು ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಕಾರಣವೇನೆಂದರೆ, ಈಗ ಜಾರಿಯಲ್ಲಿರತಕ್ಕ ಕಾನೂನು Indian Arms Rules. In this Rule 46 which relates to collection of fees, if is contemplated that all fees payable under articles 44 and 45 shall be paid in cash. ಇದರ ಪ್ರಕಾರ ಈಗ ಇದಕ್ಕೆ ನಗದು ಹಣ ಕೊಡಬೇಕು. ರೂಲ್ಸ್ ಪ್ರಕಾರ ಫೀಜಿಗೆ ಕೊಡತಕ್ಕ ಮೊಬಲಗನ್ನು ಈಗ ಸ್ಟ್ಯಾಂಪ್ ಮೂಲಕ ಕೊಡಲು ಅವಕಾಶವೇ ಇಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ವಿಚಾರ ಯಾವ ರೈತರಿಗೂ ಗೊತ್ತಿಲ್ಲ, ಅಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರದಲ್ಲಿ ಅವರಿಗೆಲ್ಲಾ ತಕ್ಕ ತಿಳಿವಳಿಕೆ ಕೊಡಲು ಆಯಾ ತಾಲ್ಲೂಕು ಕಚೇರಿಯ ಮೂಲಕ ತಕ್ಕ ಏರ್ಪಾಡು ಮಾಡೋಣ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಟ್ರೆಜರಿ ಚಲ್ಲಾನ್ ಜೊತೆಗೆ ಸ್ಟ್ಯಾಂಪನ್ನು ಸಹ ಅಂಟಿಸಿ ಅರ್ಜಿಗಳನ್ನು ಕೊಟ್ಟಿರುವುದಾಗಿ ರೈತರು ನನ್ನಬಳಿ ದೂರು ಹೇಳಿದ್ದಾರೆ; ಇದು ನಿಜವೇ?

ಶ್ರೀ ಎಚ್. ಸಿದ್ದವೀರಪ್ಪ.—ಒಂದುವೇಳೆ ಹಾಗೇನಾದರೂ ಆಗಿದ್ದರೆ ಅಂಥ ಕೇಸುಗಳನ್ನು ನನ್ನ ಗಮನಕ್ಕೆ ತಂದರೆ ಆ ರೀತಿ ಡಬ್ಬಲ್ payment ಆಗಿರುವುದನ್ನು refund ಮಾಡಿಸಲು ಏರ್ಪಾಡು ಮಾಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಬಂದೂಕು ಲೈಸೆನ್ಸ್ renewal ವಿಚಾರದ ಬಗ್ಗೆ ಹಲವು ಮಂದಿಗೆ ಈ ಹೊಸ ವ್ಯವಸ್ಥೆಯ ಕ್ರಮ ತಿಳಿಯದೆ ತೊಂದರೆಯಾಗಿದ್ದರೆ ಅವರಿಗೆ ಕೂಡಲೇ ಈ ಬಗ್ಗೆ ಅನುಕೂಲ ಕಲ್ಪಿಸಿ ಕೊಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅಂಥ ಕೇಸುಗಳು ಗಮನಕ್ಕೆ ಬಂದರೆ, ನೋಡೋಣ.

12-30 P.M.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಸ್ಪೀಕರ್ ಅವರು ಈ ಮಾನ್ಯ ಸಭೆಯ ಸದಸ್ಯರನೇಕರು ರೈಫಲ್ ಕ್ಲಬ್ ಮಾಡಿ ನಮಗೆಲ್ಲರಿಗೂ ಟ್ರೈನಿಂಗ್ ಕೊಡಬೇಕೆಂದು ಸರ್ಕಾರದವರ ಗಮನಕ್ಕೆ ತಂದಿರುವುದು ಗೊತ್ತೇ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದವರು ಅದನ್ನು ಮಾಡಲಕ್ಕೆ ಪ್ರಯತ್ನ ಮಾಡಬಹುದು. ತಾವು ಯಾರಾದರೂ ಮುಂದೆ ಬಂದರೆ ಸಹಾಯ ಮಾಡಲಕ್ಕೆ ತಯಾರಾಗಿದ್ದೇವೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಇಂಡಿಯಾ ದೇಶದ ಹೊರಗೆ ಈಗ ಇರತಕ್ಕ ವಾತಾವರಣದಲ್ಲ, ಆದಷ್ಟು ಈ ಸಭೆಯ ಮಾನ್ಯ ಸದಸ್ಯರನೇಕರಿಗೆ ಅನುಕೂಲಪಡಿಸುವುದಕ್ಕಾಗಿ ಈ ರೂಲ್ಸನ್ನು ನಡಿಲ ಮಾಡುವುದಕ್ಕೆ ತಾವು ಶಿಫಾರಸು ಮಾಡುತ್ತೀರಾ?

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಈಗ ಎರಡು ವರ್ಷಗಳಿಂದಲೂ ಡೆಪ್ಯುಟಿ ಕಮಿಷನರು ಲೈಸೆನ್ಸ್ ರಿನ್ಯೂ ಮಾಡುವಾಗ ಸ್ಟ್ಯಾಂಪ್ ಕೂಡ ಲಗತ್ತಿಸಿ ಕೊಡಬೇಕೆಂದು ಕಾನೂನು ಮಾಡಿದ್ದಾರೆ; ಇಲ್ಲದೇ ಇದ್ದರೆ ವಾಪಸು ತೆಗೆದುಕೊಳ್ಳುತ್ತಾ ಇದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಕಾನೂನಿಗೆ ವ್ಯತಿರಿಕ್ತವಾಗಿದ್ದರೆ, ಗಮನಕ್ಕೆ ತಂದರೆ, ವಿಚಾರಿಸುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ.—ಖಾನಗಿಯವರಿಗೆ ತಾವು ಲೈಸೆನ್ಸ್ ಕೊಡುವಾಗ ರಿವಾಲ್ವರ್ ಮತ್ತು ಮನಲ್ ಲೋಡರ್ಸ್ ಇವೆರಡರಲ್ಲಿ ಯಾವುದಕ್ಕೆ ಲೈಸೆನ್ಸ್ ಕೊಡುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಎರಡಕ್ಕೂ.

ಶ್ರೀ ಕೆ. ವಿ. ಬೈರೇಗೌಡ.—ಹಾಗಾದರೆ ರಿವಾಲ್ವರ್ಸ್ ಮೇಲೆ ಮಾತ್ರ insist ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?